ವಿಜಯವಾಣಿ
ಕನ್ನಡಿಗರ ಧ್ವನಿ
ಬೆಂಗಳೂರು
24 ಜುಲೈ 2013
ಬುಧವಾರ
ಪುಟ: 16+4
₹3
JULY 24, 2013
VIJAYAVANI • BANGALORE • www.epapervijayavani.in

# ಊಟದ ಜೊತೆಗೆ ನೀರು



ಬೆಂಗಳೂರಿನ ಎಂಎಸ್‌ಇಸಿಟಿ ವಿಶೇಷ

**ಸರ್ಕಾರಿ ಶಾಲಾ ಮಕ್ಕಳಿಗೂ ಹೈಫೈ ಶಾಲೆಗಳಲ್ಲಿ ಸಿಗುವ ಎಲ್ಲ ಸೌಲಭ್ಯಗಳು ಸಿಗಬೇಕು ಎನ್ನುವ ಉದ್ದೇಶದಿಂದ ಬೆಂಗಳೂರು, ಮೈಸೂರು ಹಾಗೂ ಮಂಡ್ಯದಲ್ಲಿ 200 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದೇವೆ. ಈ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸಲಾಗುತ್ತದೆ. ಎಲ್ಲ ಸವಲತ್ತುಗಳಿಗಾಗಿ ಪ್ರತಿ ವರ್ಷ ಒಂದು ಶಾಲೆಗೆ 25 ಲಕ್ಷ ರೂ. ಖರ್ಚು ಬರುತ್ತದೆ. ಇದು ಒಟ್ಟು 50 ಕೋಟಿ ರೂ.ಗಳ ಯೋಜನೆ.**

| ಮೊಹಿಸಿನ್ ಶರೀಫ್ ಎಂಎಸ್‌ಇಸಿಟಿ ಮುಖ್ಯಸ್ಥ

**ಕೇಂ**ದ್ರ ಸರ್ಕಾರ ಬಿಸಿಯೂಟ ಯೋಜನೆ ಆರಂಭಿಸುವ ಮೊದಲೇ ಬೆಂಗಳೂರಿನ ಮೊಹಿಸಿನ್ ಶರೀಫ್ ಎಜುಕೇಷನ್ ಆಂಡ್ ಚಾರಿಟೆಬಲ್ ಟ್ರಸ್ಟ್(ಎಂಎಸ್‌ಇಸಿಟಿ) ಮಕ್ಕಳಿಗೆ ಬಿಸಿಯೂಟ ಒದಗಿಸುತ್ತಿದೆ. ಕೇಂದ್ರ ಸರ್ಕಾರ ಬಿಸಿಯೂಟ ಯೋಜನೆ ಜಾರಿಗೆತಂದ ನಂತರದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜತೆ ಸೇರಿಕೊಂಡು ಟ್ರಸ್ಟ್ ಈ ಕಾರ್ಯ ಮುಂದುವರಿಸಿಕೊಂಡು ಹೋಗುತ್ತಿದೆ.

1999ರಲ್ಲಿ ಆರಂಭವಾದ ಈ ಸಂಸ್ಥೆಯು ಸಾಮಾಜಿಕ ಕಾರ್ಯಕರ್ತ ಮೊಹಿಸಿನ್ ಶರೀಫ್ ಅವರ ನೇತೃತ್ವದಲ್ಲಿ ನಡೆಯುತ್ತಿದೆ. ಶಾಲಾ ಮಕ್ಕಳ ಜತೆಯಲ್ಲಿ ಹಿರಿಯ ನಾಗರಿಕರಿಗೆ ಹಾಗೂ ಖಾಸಗಿ ಶಾಲೆ ಮಕ್ಕಳಿಗೂ ಈ ಟ್ರಸ್ಟ್ ಬಿಸಿಯೂಟದ ವ್ಯವಸ್ಥೆ ಮಾಡುತ್ತಿದೆ.

ಎಂಎಸ್‌ಇಸಿಟಿಗೆ ಬಿಸಿಯೂಟ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಶೇ.75 ಹಾಗೂ ರಾಜ್ಯ ಸರ್ಕಾರದಿಂದ ಶೇ.25 ಅನುದಾನ ಬರುತ್ತಿದೆ. ಈ ಸಂಸ್ಥೆಯ ಇನ್ನೊಂದು ವಿಶೇಷವೆಂದರೆ ಬಿಸಿಯೂಟದ ಜತೆಗೆ ಶುದ್ಧೀಕರಿಸಿದ 750 ಮಿ.ಲೀ. ನೀರನ್ನೂ ನೀಡಲಾಗುತ್ತದೆ. ಮಿನರಲ್ ವಾಟರ್ ಸಾಗಾಟದ ವೆಚ್ಚ ತಪ್ಪಿಸಲು ಇದಕ್ಕಾಗುವ ಖರ್ಚಿನ ಹಣವನ್ನು ನೇರವಾಗಿ ಶಾಲೆಯ ಮುಖ್ಯ ಶಿಕ್ಷಕರ ಖಾತೆಗೆ ವರ್ಗಾಯಿಸಲಾಗುತ್ತದೆ. ಅವರು ಸ್ಥಳೀಯವಾಗಿ ನೀರು ಖರೀದಿಸಿ ಮಕ್ಕಳಿಗೆ ನೀಡುತ್ತಾರೆ.

ಎಂಎಸ್‌ಇಸಿಟಿ ಸಂಸ್ಥೆಯು ಬಿಸಿಯೂಟಕ್ಕೆ ಸರ್ಕಾರ ನೀಡುವ ಅಕ್ಕಿಯನ್ನೇ ಬಳಸಿಕೊಳ್ಳುತ್ತದೆ. ಆ ಅಕ್ಕಿಯನ್ನು ಯಂತ್ರದ ಮೂಲಕ ಶುದ್ಧೀಕರಿಸಲಾಗುತ್ತದೆ. ಇದಕ್ಕಾಗಿ ಮೂರು ಶುದ್ಧೀಕರಣ ಘಟಕಗಳಿವೆ. ಅಕ್ಕಿಯಲ್ಲಿರುವ ಕಲ್ಲು, ಭತ್ತ ಇತ್ಯಾದಿ ವಸ್ತುಗಳನ್ನು ಬೇರ್ಪಡಿಸಿ ಮಕ್ಕಳಿಗೆ ಶುದ್ಧ ಅಕ್ಕಿಯ ಅನ್ನವನ್ನು ಒದಗಿಸಲಾಗುತ್ತದೆ.

ಬೆಂಗಳೂರಿನ 250 ಶಾಲೆಗಳ 35 ಸಾವಿರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುತ್ತದೆ. ಸುಮಾರು 90 ಸಿಬ್ಬಂದಿ ಇಲ್ಲಿ ಕೆಲಸ ಮಾಡುತ್ತಾರೆ. ಸಂಸ್ಥೆ ಕಳೆದ 12 ವರ್ಷದಿಂದ ಈ ಕಾರ್ಯ ಮಾಡುತ್ತಿದೆ.